ವಾರದ ಪತ್ರ

## ಡಿವೋರ್ಸ್ ಪೇಪರ್ ಮತ್ತು ಕಿರುತೆರೆ!




ತಾಯಿಯೊಬ್ಬರು ತಮ್ಮ ಮಗಳೊಂದಿಗೆ ಕೋರ್ಟ್‌ಗೆ ಬಂದಿದ್ದರು. 'ಇಲ್ಲಿ ಡಿವೋರ್ಸ್ ಪೇಪರ್ ಎಲ್ಲಿ ಸಿಗುತ್ತೆ?' ಎಂದು ವಕೀಲರನ್ನು ಪ್ರಶ್ನಿಸುತ್ತಿದ್ದರು. ಬಹುಶಃ ಅವರು ಧಾರಾವಾಹಿಗಳನ್ನು ನೋಡಿ ದಾರಿ ತಪ್ಪಿರಬಹುದು ಎಂದು ಭಾಸವಾಯಿತು!

ಕನ್ನಡದ ಕಿರುತೆರೆಯ ಬಹುತೇಕ ಎಲ್ಲಾ ಧಾರಾವಾಹಿಗಳಲ್ಲಿ 'ಡಿವೋರ್ಸ್ ಪತ್ರಕ್ಕೆ ಸಹಿ ಮಾಡು' ಎನ್ನುವ ಡೈಲಾಗ್ ಸಾಮಾನ್ಯವಾಗಿದೆ. ಧಾರಾವಾಹಿಯ ನಿರ್ದೇಶಕರಿಗೆ ಕಾನೂನಿನ ಜ್ಞಾನ ಇರದಿದ್ದರೆ ಕಾನೂನು ಸಲಹೆಯನ್ನಾದರೂ ಪಡೆದು ಕಥೆ ಮಾಡಬಹುದು. ದಂಪತಿ ಪರಸ್ಪರ ಒಪ್ಪಿ ವಿವಾಹ ವಿಚ್ಛೇದನ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ನ್ಯಾಯಾಲಯಕ್ಕೆ ಮನವರಿಕೆ ಮಾಡಿದರೆ ಮಾತ್ರ ಡಿವೋರ್ಸ್ ಸಿಗುತ್ತದೆ. ಡಿವೋರ್ಸ್ ಪತ್ರಕ್ಕೆ ಸಹಿ ಪಡೆದೊಡನೆ ಡೈವೋರ್ಸ್ ಆಗಿಬಿಡುತ್ತದೆ ಎಂಬುದು ಮೂರ್ಖತನ. ಮಳೆ ಬಯಸಿ ಕಪ್ಪೆ ಮದುವೆ ಮಾಡುವುದಕ್ಕೂ ಧಾರಾವಾಹಿಗಳಲ್ಲಿ ಡಿವೋರ್ಸ್ ನೀಡುವುದಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ. ಟೀವಿಯನ್ನು 'ಮೂರ್ಖರ ಪೆಟ್ಟಿಗೆ' ಎಂದು ಕರೆಯುವುದಕ್ಕೆ ಇಂತಹ ಧಾರಾವಾಹಿಗಳ ಡಿವೋರ್ಸ್ ಪತ್ರಗಳೂ ಕಾರಣ!

—ಪಿ.ಜೆ. ರಾಘವೇಂದ್ರ, ಮೈಸೂರು

## ಭಗವಂತನೇ ಭೇಷ್

ಧಾರಾವಾಹಿಗಳು ಸಮಾಜಕ್ಕೆ ಕೊಡುತ್ತಿರುವ ಸಂದೇಶವಾದರೂ ಏನು? ತಂಗಿಯ ಬಾಳು ಕೆಡಿಸಲು ಪ್ರಯತ್ನ ಮಾಡುತ್ತಿರುವ ಅಕ್ಕ, ತವರುಮನೆ ಹಾಳು ಮಾಡುವ ಮನೆಮಗಳು – ಝೀ ಕನ್ನಡದ 'ಸತ್ಯ' ಧಾರಾವಾಹಿಯ ದಿವ್ಯ ಹಾಗೂ ಕೀರ್ತನ ಅದಕ್ಕೆ ಸಾಕ್ಷಿ. ಅಣ್ಣನ ಮನೆ ನೆಮ್ಮದಿ ಕೆಡಿಸಲು ತುದಿಗಾಲಲ್ಲಿ ನಿಂತಿರುವ ತಂಗಿ ಮತ್ತು ಅವಳ ಮಗಳು, ತನ್ನ ಸವತಿಯನ್ನು ಸಾಯಿಸುವ ಯತ್ನವನ್ನು ಮಾಡುವವಳು 'ಪುಟ್ಟಕ್ಕನ ಮಕ್ಕಳು' ಧಾರಾವಾಹಿಯ ರಾಧಾ, ಅವಳಮ್ಮ ಮತ್ತು ರಾಜಿ.

ಮಗಳ ಬಾಳನ್ನು ಹಾಳು ಮಾಡಲು ಪಿತೂರಿ ನಡೆಸುವ ತಾಯಿ ಕಲರ್ಸ್ ಕನ್ನಡದ 'ರಾಮಾಚಾರಿ'ಯಲ್ಲಿದ್ದಾಳೆ. ಈ ತರಹದ ಧಾರಾವಾಹಿಗಳನ್ನು ಅತ್ತೆ, ಸೊಸೆ, ಅಕ್ಕ, ತಂಗಿ, ತಾಯಿ, ಮಗಳು ಒಟ್ಟಿಗೆ ಕೂತು ನೋಡುವ ಹಾಗಿಲ್ಲ. ಉತ್ತಮ ಸಂದೇಶ ಮತ್ತು ನೈಜ ಸಮಸ್ಯೆಗಳ ಪರಿಹಾರಕ್ಕೆ ಬೆಳಕು ಚೆಲ್ಲುವ ನಿಟ್ಟಿನಲ್ಲಿ 'ಭೂಮಿಗೆ ಬಂದ ಭಗವಂತ' ಚೆನ್ನಾಗಿದೆ ಎಂದು ಅನ್ನಿಸುತ್ತದೆ.

—ಬೀ. ನಾಗರಾಜು, ಬೆಂಗಳೂರು

## ಇಂಗ್ಲಿಷ್ ಮೋಹದಲ್ಲಿ ಮಾತೃಭಾಷಾ ದಿನ

ಸ್ಟಾರ್ ಸುವರ್ಣ ವಾಹಿನಿಯ 'ಬೊಂಬಾಟ್ ಭೋಜನ' ಕಾರ್ಯಕ್ರಮ ನಡೆಸಿಕೊಡುತ್ತಿರುವ ಸಿಹಿ ಕಹಿ ಚಂದ್ರು ಫೆಬ್ರುವರಿ 20ರ ಕಾರ್ಯಕ್ರಮದಲ್ಲಿ 'ಇಂದು ಅಂತರರಾಷ್ಟ್ರೀಯ ಮಾತೃಭಾಷಾ ದಿನ' ಎಂದು ಶುಭಾಶಯ ತಿಳಿಸಿದರು. ಆದರೆ, ಅದನ್ನು ಇಂಗ್ಲಿಷ್‌ನಲ್ಲಿ ಹೇಳಿದರು. ಅಂದು ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಲೇಖಕಿ ಶೋಭಾ ರಾವ್ ಅವರಿಗೂ 'Wish you a happy international mother tongue day' ಎಂದು ಶುಭ ಹಾರೈಸಿದರು.

ಮಾತೃಭಾಷಾ ದಿನ ಪ್ರತಿ ವರ್ಷ ಫೆಬ್ರುವರಿ 21ರಂದು ಆಚರಿಸಲಾಗುತ್ತದೆ. ಫೆಬ್ರುವರಿ 20ರಂದು ಅಲ್ಲ. ಎರಡನೆಯದಾಗಿ, ಸಿಹಿ ಕಹಿ ಚಂದ್ರು, ಶೋಭಾ ರಾವ್ ಸೇರಿದಂತೆ ಬಹುತೇಕರ ತಾಯಿನುಡಿ ಕನ್ನಡ. ಹಾಗಾಗಿ, ಹಾರೈಕೆಯನ್ನು ಕನ್ನಡದಲ್ಲೇ ತಿಳಿಸಿದ್ದರೆ ಸಮಂಜಸವಾಗಿರುತ್ತಿತ್ತು. ಅನೇಕ ಕನ್ನಡ ನಟ ನಟಿಯರಿಗೆ, ಕಾರ್ಯಕ್ರಮ ನಿರೂಪಕರಿಗೆ ಇಂಗ್ಲಿಷ್ ವ್ಯಾಮೋಹ ಏಕೋ ತಿಳಿಯುತ್ತಿಲ್ಲ.

—ಹೆಚ್.ವಿ. ಶ್ರೀಧರ್, ಬೆಂಗಳೂರು

## ಆಹ್ಲಾದಕರ ಜನಪದ 'ಗಾನ ಗರಡಿ'

ಜಾನಪದ ಸಂಸ್ಕೃತಿ ನಮ್ಮ ಬದುಕಿನ ಒಂದು ಭಾಗವಾಗಿದೆ ಎಂದರೆ ತಪ್ಪಾಗಲಾರದು. ಬಗೆ ಬಗೆಯ ಜನಪದ ಗೀತೆಗಳು ನಿರಂತರ ಅನುಸಂಧಾನ ಮಾಡುತ್ತವೆ. ನಿತ್ಯದ ನೋವು–ನಲಿವು, ಕಾರ್ಯ ನಿಪುಣತೆ, ಸಂಪ್ರದಾಯ, ಮದುವೆ–ಮುಂಜಿ, ಹಸೆ, ಹಬ್ಬ ಹರಿದಿನಗಳ ಹಿಗ್ಗಿನ ಪದ, ದೇವರು ದಿಂಡಿರ ಕಥನ ಕವನ, ಜನಸಾಮಾನ್ಯರ ಅನುಭವಗಳ ಮಧುರಯಾನವನ್ನೇ 'ಚಂದನ' ವಾಹಿನಿ ಪ್ರಸ್ತುತಪಡಿಸುತ್ತಿರುವ 'ಗಾನ ಗರಡಿ'ಯಲ್ಲಿ ಬಿಂಬಿತವಾಗುತ್ತಿದೆ. ಇದೊಂದು ಆಹ್ಲಾದಕರ ಕಾರ್ಯಕ್ರಮ.

—ವೀಣಾ ಶಂಕರ್, ಬೆಂಗಳೂರು

## ಜಾಹೀರಾತುಗಳಲ್ಲೂ ರಂಜನೆ

ಧಾರಾವಾಹಿಗಳ ಮಧ್ಯದಲ್ಲಿ ಬರುವ ಜಾಹೀರಾತುಗಳಿಂದ ಒಂದಿಷ್ಟು ಮನರಂಜನೆ ಸಿಗುತ್ತದೆ ಎಂದು ನನಗೆ ಅನ್ನಿಸುತ್ತದೆ. ಉತ್ಪನ್ನಗಳ ಗುಣಮಟ್ಟದ ನೈಜತೆಯಲ್ಲಿ ಹುರುಳಿಲ್ಲದಿದ್ದರೂ ಒಂದಿಷ್ಟು ಚುರುಪಾರು ಮನರಂಜನೆ ನೀಡುವುದಂತೂ ಗ್ಯಾರಂಟಿ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಮಕ್ಕಳ ಪ್ರತಿಭೆಗೆ ಮನಸೋಲದವರಾರು?

ಝೀ ಕನ್ನಡದ 'ಡ್ರಾಮಾ ಜೂನಿಯರ್ಸ್'ನಲ್ಲಿ ಸುದ್ದಿ ವಾಚಕರ ಕುರಿತು ನಾಟಕವನ್ನು ಮಾಡಿದರು. ಆ ಪ್ರದರ್ಶನ ಸೊಗಸಾಗಿತ್ತು. ಪ್ರೇಕ್ಷಕ ಗ್ಯಾಲರಿಯಲ್ಲಿದ್ದ ವಾಚಕರು ಮಕ್ಕಳ ನಾಟಕ ನೋಡಿ ತಮ್ಮ ಕೆಲವು ಅನುಭವಗಳನ್ನು ಹಂಚಿಕೊಂಡರು. ಮಕ್ಕಳು 'ಯಕ್ಷ ಪ್ರಶ್ನೆ' ಎನ್ನುವ ಪಾಂಡವರ ವನವಾಸದ ಪ್ರಹಸನವನ್ನು 'ಯಮ ಹಾಗೂ ಯುಧಿಷ್ಠಿರ' ಅವರ ನಡುವಿನ ಸಮಾಲೋಚನೆ ವೀಕ್ಷಕರನ್ನು ನಿಬ್ಬೆರಗಾಗಿಸಿತು. ಮಹಾಕಾವ್ಯದ ಪಾತ್ರಗಳನ್ನು ನಟನೆ ಮೂಲಕ ಪ್ರಸ್ತುತಪಡಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ.

—ಭಾರತೀ ಗಂಗಾಧರ್, ಬೆಂಗಳೂರು

## ಹಾಡಿನ ಜೊತೆಗೆ ಯಕ್ಷವೈಭವವೂ ಸೊಗಸು



ಝೀ ಕನ್ನಡ ವಾಹಿನಿಯ 'ಸರಿಗಮಪ' ಶೋ 'ಫ್ಯಾಮಿಲಿ ರೌಂಡ್'ನಲ್ಲಿ ಸ್ಪರ್ಧಿಗಳು ತಮ್ಮ ಕುಟುಂಬ ಸದಸ್ಯರ ಜೊತೆ ಹಾಡಿದ್ದು ಸೊಗಸಾಗಿತ್ತು. ರಮೇಶ್ ಲಮಾಣಿ ಹಾಗೂ ಆತನ ಸಹೋದರ ಮಧುರವಾಗಿ ಹಾಡಿದರು. ಪ್ರಜ್ಞಾ ಮರಾಠೆ ಅವರು ತಮ್ಮ ತಾಯಿ ಹಾಗೂ ಅವರ ತಂಡದವರ ಜೊತೆ ಪ್ರಸ್ತುತಪಡಿಸಿದ 'ಕಂಸ ವಧೆ' ಯಕ್ಷಗಾನ ಪ್ರಸಂಗ ವೀಕ್ಷಕರಿಗೆ ಮನರಂಜನೆಯನ್ನು ಕೊಟ್ಟಿತು. ಕೃಷ್ಣನ ಪಾತ್ರದಲ್ಲಿ ಪ್ರಜ್ಞಾ ಬಹಳ ಚೆನ್ನಾಗಿ ಅಭಿನಯಿಸಿದರು. ತಮ್ಮ ಪ್ರತಿಭೆ ಹಾಡುಗಾರಿಕೆಯಲ್ಲಿ ಮಾತ್ರವಲ್ಲ ಎಂಬುದನ್ನು ತೋರಿಸಿಕೊಟ್ಟರು.

—ಕೆ.ಎಸ್. ಸವಿತಾ, ಬೆಂಗಳೂರು